ಮದುವೆ ಮನೆಯ ಸಂಭ್ರಮ, ಗೌಜು ಗದ್ದಲದೊಂದಿಗೆ, ಅಲ್ಲಿನ ಸ್ವಾರಸ್ಯಕರ ಸನ್ನಿವೇಶಗಳನ್ನು, ಮದುವೆಯೊಂದಿಗೆ ಬೆಸೆದುಕೊಂಡಿರುವ ಪದ್ಧತಿಗಳನ್ನು, ಕಾಲಾನಂತರದಲ್ಲಿ ಬದಲಾಗಿರುವ ವಿವಾಹದ ಸ್ವರೂಪಗಳನ್ನು ಹಾಸನದ ಭಾಷೆಯಲ್ಲಿ ತೆರೆದಿಟ್ಟಿದ್ದಾರೆ

ಸುಮಾವೀಣಾ



# ‘ಧಂ–ಪತಿ’ ಮುಯ್ಯಿ



ನಮ್ ವಾಣಿ ಮದುವೆ ಮಿಸ್ ಮಾಡೋಕ್ಕಾಗತ್ತ? ನಮ್ ಮನೆ ಪಕ್ಕ ಅಲ್ಲಾ ಅದರ ಪಕ್ಕ ಅವರ ಮನೆ. ವಾಣಿ ಮದುವೆ ಗದ್ಲ ಶುರು ಅದಾಗಿಂದ ಶಾಪಿಂಗ್, ಫೋಟೊ ಶೂಟಿಂಗ್ ಎಲ್ಲದ್ರು ಬಗ್ಗೆನು ಅಪ್ಡೇಟ್ಸ್ ಕೊಡ್ತನೆ ಇದ್ಲು. ಗೊತ್ತಲ್ಲ ಮದುವೆ ಅಂದರೆ ಮೊದ ಮೊದಲು ಮದು, ಆಮ್ಯಾಲೆ ‘ವ್ಯಾ’ ಅಂತ. ಇರಲಿ ಎಲ್ಲರಿಗೂ ಹಾಗಾಗ್ಬೇಕು ಅಂತಿಲ್ಲವಲ್ಲ. ನಮ್ ವಾಣಿ ಮದುವೆ ಅಲ್ವಾ ಅಂತ ನಾವೂ ಶಾಪಿಂಗ್, ಪಾರ್ಲರ್ ಅಂತ ಎಲ್ಲ ವ್ಯವಸ್ಥೆ ಮಾಡ್ಕೊಂಡ್ವಿ. ಚಪ್ರ, ಮೆಹೆಂದಿ ಅರಿಶಿಣ ಶಾಸ್ತ್ರ ಎಲ್ಲದಕ್ಕೂ ಅಟೆಂಡ್ ಮಾಡಿದ್ವಿ. ಎಂಥಾ ಗೌಜಿನ್ ಮದುವೆ ಗೊತ್ತಾ? ಊಟಪಚಾರ ಎಲ್ಲಾ ಪರ್ಫೆಕ್ಟ್!

ಮದುವೆ ದಿನ ಮದುವೆ ಹುಡುಗಿಗಿಂತ ಗ್ರಾಂಡ್ ಆಗಿ ಡ್ರೆಸ್ ಮಾಡ್ಕೊಂಡು ಫೋಟೋಶೂಟ್ ಮಾಡಿಸಿಕೊಳ್ಳೋ ಹುಡುಗಿಯರಿಗೆ ಏನು ಕಮ್ಮಿನೆ? ಎಲ್ಲರೂ ಅದಕ್ಕೆ ಅಂತ ಯೂನಿಕ್ ಆಗಿ ಮಾಡಿದ್ದ ಸೆಲ್ಫಿ ಸ್ಟ್ಯಾಂಡಲ್ಲಿ ಫೋಟೊ ತೆಗೆಸ್ಕೊಳ್ಳೋದೇ ತೆಗೆಸ್ಕೊಳೋದು. ಅಯ್ಯೋ ರಾಮ! ಇಷ್ಟೊಂದು ಹುಚ್ಚ! ಫೋಟೋಕ್ಕೆ? ಮದುವೆ ರಿಸೆಪ್ಶನಲ್ ಮದುವೆ ಹುಡುಗ ಹುಡುಗಿ ಆಚೆ ನಿಲ್ಲಿಸಿ ಈಚೆ ನಿಲ್ಸಿ ಎಲ್ಲಾ ಫೋಟೋ ತೆಗೆಸ್ಕೊತಾ ಇದ್ರು, ಪಾಪ ವಯಸ್ಸಾದವರು ಒಬ್ಬರು ಬಂದು ಓದಿಸ್ಬೇಕಿತ್ತು. ಈ ಹುಡ್ಗೀರ್ ಫೋಟೋ ಹುಚ್ಚು ಆ ಆ ವೃದ್ಧ್ರನ್ನ ಕೆರಳಿಸಿ ‘ಏನು ಸಿನಿಮಾ ತಾರೆರ್ ಇದ್ದಂಗ್ ಇದ್ದೀವಿ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– editorsu@sudha.co.in